ಹೆಚ್ಚು ಜನ ಪಾರ್ಟ್‌ಟೈಮ್‌ನವರು ಇದ್ದಾರೆ ಎಂದು ಹೇಳಿದ್ದೀರಿ. ಅಲ್ಲಿ ಪಾರ್ಟ್‌ಟೈಮ್‌ನವರು ಇದ್ದಾರೆ. 87 ರಿಂದ ಎಕಾನಮಿ ಆರ್ಡರ್ ಇತ್ತು, ಅಪಾಯಿಂಟ್‌ಮೆಂಟ್ ಮಾಡಲು ಆಗಲಿಲ್ಲ. ಈಗ ಆ ಎಕಾನಮಿ- ಆರ್ಡರನ್ನು ರಿಲ್ಯಾಕ್ಸ್ ಮಾಡಿದ್ದೇವೆ ; ಅದನ್ನು ತೆಗೆದುಹಾಕಿದ ಮೇಲೆ ಸ್ಪೆಶಲ್ ರಿಕ್ರೂಟ್‌ಮೆಂಟ್ ರೂಲ್ ಆಗಿದೆ. ಸಜೆಷನ್ಸ್ ಆ್ಯಂಡ್ ಅಬ್‌ಜೆಕ್‌ಷನ್ಸ್‌ಗೆ ಕಳುಹಿಸಿದ್ದೇವೆ. ಇನ್ನು ಎರಡು ಮೂರು ವಾರದಲ್ಲಿ ಸ್ಪೆಶಲ್ ರಿಕ್ರೂಟ್‌ಮೆಂಟ್ ರೂಲ್ ಮಾಡಿಕೊಂಡು ನೆಕ್ಸ್ಟ್ ಆಕ್ಯಾಡೆಮಿಕ್ ವರ್ಷದಲ್ಲಿ ಎಲ್ಲಾ ಲೆಕ್ಚರರನ್ನು ಕೊಡುತ್ತೇವೆ. ಇನ್ನು ನಿಮ್ಮ ಮೂರನೆಯ ಪ್ರಶ್ನೆ ಕಟ್ಟಡದ ಬಗ್ಗೆ ಹೇಳಬೇಕಾದರೆ ನನಗೆ ಗೊತ್ತಿದೆ. ಲ್ಯಾಂಡ್ ವಿಚಾರದಲ್ಲಿ ನೀವು ಹೆಚ್ಚು ಆಸಕ್ತಿ ವಹಿಸಿ ನಿಮ್ಮ ಪ್ರಯತ್ನದಿಂದ ಹದಿನಾಲ್ಕು ಎಕರೆ ಈಗ ಮೊನ್ನೆ ಮೊನ್ನೆ ನಮಗೆ ಸಿಕ್ಕಿದೆ; ಅದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ನೀವು ಬಹಳ ಪ್ರಯತ್ನ ಮಾಡಿದ್ದೀರಿ. ನಿಮ್ಮ ಮತಕ್ಷೇತ್ರದಲ್ಲಿ ಆಗಬೇಕು ಎಂದು ಹೇಳಿ ನೀವು ಹೆಚ್ಚು ಆಸಕ್ತಿಯನ್ನು ವಹಿಸಿದ್ದೀರಿ. ಲ್ಯಾಂಡ್ ಬಂದ ಮೇಲೆ ಬಿಲ್ಡಿಂಗ್ ಕಟ್ಟುವ ವಿಚಾರದಲ್ಲಿ ನಾವು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ದಯವಿಟ್ಟು ಈ ವರ್ಷ ಕಟ್ಟಡದ ಕೆಲಸವನ್ನು ಪಾರ್ರಂಭ ಮಾಡುತ್ತೀರಾ? ಅನುದಾನವನ್ನು ಬಿಡುಗಡೆ ಮಾಡಲು ಪ್ರಯತ್ನ ಮಾಡುತ್ತೀರಾ ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ಈಗಾಗಲೇ ಮಂತ್ರಿಗಳು ಉತ್ತರ ಹೇಳಿದ್ದಾರೆ. ನಿಮ್ಮ ಪ್ರಶ್ನೆಗೆ ಏಳು ನಿಮಿಷಗಳನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಅವರು ಆಶ್ವಾಸನೆ ಕೊಡಲಿ ಎಂದು ನಾನು ಕೇಳುತ್ತಿದ್ದೇನೆ.

<u>ವಿಷಯ : ಬಿಜಾಪುರ ಸೈನಿಕ ಶಾಲೆಗೆ ಆರ್ಥಿಕ ಮುಗ್ಗಟ್ಟಿನಿಂದ ತೊಂದರೆ.</u>

1195

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್ಥಿಕ ಮುಗ್ಗಟ್ಟಿನಿಂದ ಬಿಜಾಪುರ ಸೈನಿಕ ಶಾಲೆ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಇ) ಈ ಸೈನಿಕ ಶಾಲೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಕೊಡಲಾಗುತ್ತಿರುವ ಸವಲತ್ತುಗಳಾವುವು ?

ಈ) ಈ ಸೈನಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಕಡೆಯಿಂದ ಹಣವನ್ನು ವಸೂಲು ಮಾಡುತ್ತಿರುವುದು ನಿಜವೆ? ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ಕಡೆಯಿಂದ ವಸೂಲು ಮಾಡಲಾಗುತ್ತಿರುವ ಹಣ ಎಷ್ಟೆಷ್ಟು ?

ಉ) ಈ ಸೈನಿಕ ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸುವ ಸಲುವಾಗಿ ಆ ಶಾಲೆಗೆ ಹೆಚ್ಚಿನ ಅನುದಾನವನ್ನು ಕೊಡಲಾಗುವುದೆ ?

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) 1992-93 ನೇ ಸಾಲಿನ ಆಯವ್ಯಯದಲ್ಲಿ ರೂ.41.25 ಲಕ್ಷಗಳನ್ನು ಸೈನಿಕ ಶಾಲೆಗೆ ನಿಗಧಿಪಡಿಸಲಾಗಿದ್ದು, ಈ ಮೊತ್ತವನ್ನು ಆ ಸಂಸ್ಥೆಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಇ) ಸೈನಿಕ ಶಾಲೆಗೆ ಬೇಕಾಗಿರುವ ಜಮೀನು, ಕಟ್ಟಡ, ಪೀಠೋಪಕರಣಗಳು ಮತ್ತು ಶಿಕ್ಷಣ ಸಾಮಗ್ರಿಗಳ ಮೇಲಿನ ಪ್ರಧಾನ ಖರ್ಚಿನ ಬಾಬ್ತು ಮತ್ತು ಆವರ್ತಕ ಖರ್ಚಿನ ಸಿಂಹ ಪಾಲನ್ನು ರಾಜ್ಯ ಸರ್ಕಾರವು ಭರಿಸುತ್ತಿದೆ.
ಉಳಿದಂತೆ ಎಲ್ಲಾ ಖರ್ಚಿಗಳಿಗೂ ಸೈನಿಕ ಶಾಲೆಯ ಪೋಷಕರು ನೀಡುವ ಶಿಕ್ಷಣ ಶುಲ್ಕ ಮತ್ತು ರಾಜ್ಯ : ಕೇಂದ್ರ ಸರ್ಕಾರದಿಂದ ನೀಡುವ ವಿದ್ಯಾರ್ಥಿ ವೇತನದ ಮೇಲೆ ಅವಲಂಬಿತವಾಗಿದೆ.

ಈ) ಪೋಷಕರು ನೀಡಬೇಕಾದ ಶುಲ್ಕ ಬಿಟ್ಟು, ಬೇರೆ ಯಾವುದೇ ಮೊಬಲಗನ್ನು ವಸೂಲಿ ಮಾಡುತ್ತಿಲ್ಲ.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : 92-93 ನೇ ಸಾಲಿನಲ್ಲಿ 41.25 ಲಕ್ಷ ರೂಪಾಯಿಯನ್ನು ಈ ಸೈನಿಕ ಶಾಲೆಗೆ ಕೊಟ್ಟಿರುವುದಾಗಿ ಹೇಳಿದ್ದೀರಿ. ಇದು ನಾರ್ಮಲ್ ಗ್ರ್ಯಾಂಟೋ ಅಥವಾ ಎಕ್ಸ್‌ಟ್ರಾ ಗ್ರ್ಯಾಂಟೋ ಎಂಬುದನ್ನು ತಿಳಿಸಬೇಕು. ಈ ಶಾಲೆ ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೆ ಎಕ್ಸ್‌ಟ್ರಾ ಅಮೌಂಟನ್ನು ಕೊಡುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದೆ. 92-93 ರಲ್ಲಿ ಯಾವ ಯಾವ ಶಾಲೆಗಳನ್ನು ಹೊಸದಾಗಿ ಮಾಡಿದ್ದೀರಿ ? ಪರಿಶಿಷ್ಟ ಜಾತಿಯವರಿಗೆ ಹಾಗೂ ಪಂಗಡದವರಿಗೆ ಈ ಸೌಲಭ್ಯ ದೊರಕುತ್ತದೆಯೇ ?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಈ ಸೈನಿಕ ಶಾಲೆ ನಮ್ಮ ರಾಜ್ಯಕಷ್ಟೇ ಅಲ್ಲ ಇಡೀ ದೇಶಕ್ಕೆ ಪ್ರತಿಷ್ಠಿತ ಶಾಲೆ. ಇದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗತಕ್ಕ ಕಳಕಳಿ ಮಾನ್ಯ ಸದಸ್ಯರಿಗೆ ಯಾವ ರೀತಿ ಇದೆ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ. ಆದರೆ ಏನ್ನಾಗಿದೆ ಎಂದರೆ, ಕೇಂದ್ರ ಸರ್ಕಾರದಿಂದ ಅಂದರೆ ಡಿಫೆನ್ಸ್ ಡಿಪಾರ್ಟ್‌ಮೆಂಟ್‌ದಿಂದ ಮಾಡಲು ಸಾಕಷ್ಟು ಅನುದಾನ ಬರುತ್ತಿತ್ತು. ಇತ್ತೀಚೆಗೆ ಅದನ್ನು ಕಡಿಮೆ ಮಾಡಿದ್ದಾರೆ. ರಾಜ್ಯ ಸರ್ಕಾರದ ಮೇಲೆ ಬಹಳಷ್ಟು ಜವಾಬ್ದಾರಿಯನ್ನು ಹಾಕಿಬಿಟ್ಟಿದ್ದಾರೆ. ಮೊನ್ನೆ ಒಂದು ಮೀಟಿಂಗ್ ನಡೆಯಿತು. ಆ ಮೀಟಿಂಗ್‌ನಲ್ಲಿ ಕೇಂದ್ರ ಸರ್ಕಾರವನ್ನು, ಹೆಚ್ಚಿಗೆ ಹಣವನ್ನು ಈ ಸೈನಿಕ ಶಾಲೆಗೆ ಕೊಡಬೇಕೆಂದು ಕೇಳಿಕೊಳ್ಳಲಾಗಿದೆ. ನಮ್ಮ ರಾಜ್ಯದ ಪರಿಸ್ಥಿತಿಯನ್ನು ಹೇಳಬೇಕಾದರೆ ಮೊದಲು ಅಂದರೆ 91-92 ರಲ್ಲಿ 35 ಲಕ್ಷ ರೂಪಾಯಿ ಕೊಡುತ್ತಿದ್ದರು. 92-93 ರಲ್ಲಿ 41.25 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಈ ಸೈನಿಕ ಶಾಲೆಯವರು 53,33,390 ರೂಪಾಯಿಗಳು ಬೇಕು ಎಂದು ಕೇಳಿದ್ದಾರೆ. ನಾವು ಕೊಟ್ಟಿದ್ದು 41.25 ಲಕ್ಷ. ಈ ಹೆಚ್ಚಿನ ಹಣವನ್ನು ಅಂದರೆ 12 ಲಕ್ಷ 889 ರೂಪಾಯಿಗಳನ್ನು ಬಿಡುಗಡೆ ಮಾಡುವ ಸಲುವಾಗಿ ಈಗಾಗಲೇ ಆರ್ಥಿಕ ಇಲಾಖೆಯವರ

ಜೊತೆಗೆ ಸಮಾಲೋಚನೆ ನಡೆಸಿದ್ದೇವೆ. ಈ ಹಣವನ್ನು ಬಿಡುಗಡೆ ಮಾಡಬೇಕೆಂದು ನಾವು ಅವರನ್ನು ಕೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಇನ್ನೂ ಹೆಚ್ಚಿನ ಹಣವನ್ನು ಸಹಿತ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಈ ಶಾಲೆಯನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಲಿಕ್ಕೆ ಕಟಿ ಬದ್ದರಾಗಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇವತ್ತಿನ ದಿವಸ ಎಸ್.ಸಿ/ಎಸ್.ಟಿ ಸ್ಕೂಡೆಂಟ್ಸ್ ಕಡೆಯಿಂದ ಆ ಶಾಲೆಯವರು ಹನ್ನೊಂದು ನೂರು ರೂಪಾಯಿ ಕಲೆಕ್ಟ್ ಮಾಡುತ್ತಿದ್ದಾರೆ. ಈ ಶಾಲೆಯ ಆರ್ಥಿಕ ಪರಿಸ್ಥಿತಿ ಚಲೋ ಇಲ್ಲವೆಂದು ಹೇಳುತ್ತಿದ್ದಾರೆ. ಶಾಲೆ ನಡೆಸಲಿಕ್ಕೆ ಸಾಧ್ಯ ಇಲ್ಲ ಎನ್ನುವ ಉದ್ದೇಶದಿಂದ, ಮುಚ್ಚಬಾರದು ಎನ್ನುವ ಉದ್ದೇಶದಿಂದ ಪ್ರಿನ್ಸಿಪಾಲರು ನಿಮ್ಮ ಕಮಿಷನರ್ ಪರ್ಮಿಷನ್ ತೆಗೆದುಕೊಂಡು ಹನ್ನೊಂದು ನೂರು ರೂಪಾಯಿ ಎಸ್‌ಸಿ/ಎಸ್‌ಟಿ. ಕಡೆಯಿಂದ ಉಪಯೋಗ ಮಾಡಿದ್ದಾರೆ. 36 ರೂಪಾಯಿ ಬೇರೆ ಇತರ ಜೆನರಲ್ ಮೆರಿಟ್ ಕಡೆಯಿಂದ . ಆದಕಾರಣ, ಇದಕ್ಕೆ ತಾವು ಆ ರೊಕ್ಕ ಪೆರೆಂಟ್ಸ್‌ಗೆ ಮರು ಪಾವತಿ ಮಾಡುತ್ತೀರಾ ಹೇಗೆ ಮತ್ತು ಮಾಡಿದರೆ ಎಷ್ಟು ಅಮೌಂಟ್ ಕಲೆಕ್ಟ್ ಮಾಡಿದ್ದೀರಿ? ಮತ್ತು ಇನ್ನೊಂದು ತಮ್ಮ ಉತ್ತರದಲ್ಲಿ ಸಿಂಹ ಪಾಲು ರಾಜ್ಯ ಸರ್ಕಾರ ಭರಿಸುತ್ತದೆ ಎಂದು ಹೇಳಿದ್ದೀರಿ. ಸಿಂಹ ಪಾಲು ಎಂದರೆ ಎಷ್ಟು ಭರಿಸುತ್ತೀರಿ? ಅದರ ಸಲುವಾಗಿ ಈ ಶಾಲೆ ಮುಚ್ಚುವ ಸ್ಥಿತಿಯಲ್ಲಿ ಇದೆ. ಕುಡಿಯಲಿಕ್ಕೆ ನೀರು ಇಲ್ಲ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ. ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುವ ಪ್ರಯತ್ನ ಮಾಡುತ್ತೇವೆ . ಈಗಾಗಲೇ 41 ಲಕ್ಷ ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದೇವೆ. ಇನ್ನು 12 ಲಕ್ಷ ರೂಪಾಯಿ ಕೊಡುತ್ತೇವೆ. ಅವರು ಕೇಳಿದಷ್ಟು ಹಣ. ಅವರು ಕೇಳಿದ್ದು 53 ಲಕ್ಷ ಚಿಲ್ಲರೆ ಕೇಳಿದ್ದಾರೆ. ನಾವು ಅದನ್ನು ಸಹಿತ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ಏನು ಹೇಳುತ್ತಾ ಇದ್ದಾರೆ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು. ಅದು ನಮ್ಮ ಗಮನಕ್ಕೆ ಬಂದಿಲ್ಲ ಆದರೆ ಇವತ್ತೇ ನಾನು ಅದರ ಬಗ್ಗೆ ಒಂದು ವರದಿ ತರಿಸಿ ಕುಡಿಯುವ ನೀರಿನ ವ್ಯವಸ್ಥೆ, ಅಲ್ಲಿ ತೊಂದರೆ ಇದೆ ಎನ್ನುವುದನ್ನು ವಿಚಾರಿಸಿ, ಆ ವ್ಯವಸ್ಥೆ ಮಾಡಲಿಕ್ಕೆ ಬಹಳ ಪ್ರಯತ್ನ ಮಾಡುತ್ತೇನೆ.

<u>ವಿಷಯ : ರಾಣೆಬೆನ್ನೂರು ನಗರಕ್ಕೆ ಆಯುರ್ವೇದ ಆಸ್ಪತ್ರೆ.</u>

82

ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಣೆಬೆನ್ನೂರು ನಗರಕ್ಕೆ ಒಂದು ಆಯುರ್ವೇದ ದವಾಖಾನೆ ಮಂಜೂರಾಗಿದೆಯೇ? ಮತ್ತು ಹಾಗಿಲ್ಲದಿದ್ದರೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಇಲ್ಲಿಯವರೆಗೆ ಮಂಜೂರಾತಿ ಮಾಡಿದಿದ್ದಲ್ಲಿ ಅದಕ್ಕೆ ಕಾರಣವೇನು?